

# ನೋಟ ಸೋಲುವುದಿಲ್ಲ

ಯಾಪಾಟಿ ಜನ ಜನ ಜನ...
ಎತ್ತ ನೋಡಿದರತ್ತ
ಪಿತಿ ಪಿತಿ ಜನ.

ಒಂದು ಜನವೆಂದರೆರಡು ಕಣ್ಣು
ಎರಡು ಕಣ್ಣೆಂದರೆ ಸಹಸ್ರ ನೋಟ
ನೂರು ಜನವೆಂದರೆ
ನೂರು ಜೊತೆ ಕಣ್ಣು
ಕೋಟ್ಯಂತರ ನೋಟ!

ಇನ್ನು ಸಾವಿರ ಕಣ್ಣೆಂದರೆ...
ಲಕ್ಷ ಕಣ್ಣೆಂದರೆ...
ಅಬ್ಬಬ್ಬಾ ಅದೆಷ್ಟೊಂದು ನೋಟ!
ಎಚ್ಚರ!

ಕಣ್ಣು ಸೋಲಬಹುದು.
ಕಾಯುವ ಕಣ್ಣಿನ
ನೋಟ ಸೋಲುವುದಿಲ್ಲ!

# ಇರುವೆ ಸಾಲು

ಇರುವೆ ನೋಡು
ಹೇಗೆ ಸಾಲಿಟ್ಟಿವೆ
ದಾಸವಾಳದ ಪಾತಿಗುಂಟ...
ಬಹುಶಃ ಪಳಗಿಸಲ್ಪಟ್ಟಿರಬೇಕು!
ಒಂದರ ಹಿಂದೊಂದು
ಸಿಪಾಯಿಗಳಂತೆ ಸಾಲಾಗಿ...

ಒಂದಾದರೂ ಅತ್ತಿತ್ತ
ಸಾಲು ತಪ್ಪಿಸಿವೆಯೇ?
ಯಾವ ಓಟದ ಸ್ಪರ್ಧೆಗೂ ನಿಲ್ಲದೇ
ನಾ ಮುಂದು,
ತಾ ಮುಂದು
ಮುಗಿಬೀಳದೇ
ನಿಧಾನಕ್ಕೆ ಮಣ್ಣು ಸಡಿಲಿಸಿ
ಭೂಮಿಯೊಳಗೆ
ಗೂಡು ಕಟ್ಟಿ
ನಿಶ್ಚಿಂತೆಯಲಿ ಬದುಕು...

ನಾವದೆಷ್ಟು ಓಡುತ್ತೇವೆ!
ದಿಕ್ಕು ತಪ್ಪುತ್ತೇವೆ!

